

# ಈ ಪುಟ್ಟ ಪೀಳಿಗೆಯ ಇ–ರೀಡಿಂಗ್

ಮಕ್ಕಳು ಪುಸ್ತಕಗಳನ್ನು ಓದುವುದರಿಂದ ಬುದ್ಧಿಶಕ್ತಿ ಹೆಚ್ಚುತ್ತದೆ ಎನ್ನುವುದು ಎಲ್ಲ ಸಂಸ್ಕೃತಿಗಳಲ್ಲಿ ಆಳವಾಗಿ ಬೇರೂರಿರುವ ನಂಬಿಕೆ. ಪುಸ್ತಕಗಳು ಕೊಡುವ ಮಾಹಿತಿ, ಹುಟ್ಟುಹಾಕುವ ಪ್ರಶ್ನೆ, ಪ್ರಚೋದಿಸುವ ವಿಚಾರಶಕ್ತಿ ಎಲ್ಲವೂ ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ, ಅದರ ವಿಕಸನದಲ್ಲಿ ಪ್ರಮುಖ ಪಾತ್ರ ವಹಿಸುವುದು ನಿರ್ವಿವಾದದ ಸಂಗತಿ. ಆದರೆ ಈ ಹೊಸಕಾಲದಲ್ಲಿ ಗ್ಯಾಜೆಟ್ ಗೇಮ್‌ಗಳಲ್ಲಿ ಮುಳುಗಿರುವ ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬಿತ್ತುವುದು ಹೇಗೆ ಎನ್ನುವ ಆತಂಕ ಈಗ ಎಲ್ಲೆಡೆ ಕಾಣುತ್ತಿದೆ. ಬಾಲ್ಯದಲ್ಲಿ ಅಜ್ಜಅಜ್ಜಿಯರಿಂದ ಕಥೆ ಕೇಳುತ್ತ ಕೇಳುತ್ತಲೇ ಪುಸ್ತಕಗಳಲ್ಲಿರುವ ಕಥೆ ಓದುವತ್ತ ಹೊರಳುತ್ತಿದ್ದ ಮಕ್ಕಳ ಕುತೂಹಲ, ಇದೀಗ ಬರೀ ಪುಟಾಣಿ ಬೆರಳುಗಳಿಂದ ತಟ್ಟುವ ಕುಟ್ಟಾಣಿಯೊಳಗೆ ಕಮರಿಹೋಗುತ್ತಿದೆ ಎನ್ನುವುದರ ಬಗ್ಗೆ ಈಗಾಗಲೇ ಅಧ್ಯಯನಗಳೂ ಆರಂಭವಾಗಿವೆ. ಮಕ್ಕಳಲ್ಲಿ ಪಠ್ಯದಿಂದಾಚೆ ಓದುವ ಹವ್ಯಾಸವನ್ನು ಬಿತ್ತಿಬೆಳೆಸಲೆಂದೇ ಹಲವು ದೇಶಗಳ ಪ್ರಾಥಮಿಕ ಶಾಲೆಗಳಲ್ಲಿ ಪ್ರತೀವಾರ ಒಂದೆರಡು ಗಂಟೆಗಳನ್ನಾದರೂ ಪುಸ್ತಕಗಳ ಗಟ್ಟಿ ಓದಿಗೆ ಮೀಸಲಿಡುವುದು ಆರಂಭವಾಗಿದೆ.

ಮುದ್ರಿತ ಪುಸ್ತಕಗಳನ್ನು ಓದುವುದನ್ನು ಕಲಿಸುವುದಕ್ಕೆ ಹೆಚ್ಚು ಗಮನ ಕೊಡುವುದಲ್ಲದೆ, ಮಕ್ಕಳು ಮೆಚ್ಚುವ ನಾನಾಬಗೆಯ ಗ್ಯಾಜೆಟ್‌ಗಳು, ಕಂಪ್ಯೂಟರ್‌ಗಳಲ್ಲೇ ಆಟದ ಜೊತೆ ಓದುವುದನ್ನೂ ಕಲಿಸುವುದು ಇಂದಿನ ಅನಿವಾರ್ಯತೆ. ಹಾಗೆ ಅವುಗಳಲ್ಲಿ ಮಕ್ಕಳಿಗಾಗಿ ಕಥೆಗಳನ್ನು, ಮಾಹಿತಿಗಳನ್ನು ತುಂಬುವುದೇ ಒಂದು ದೊಡ್ಡ ಉದ್ಯಮವಾಗಿ ಬೆಳೆದು, ನೂರೆಂಟು ಆ್ಯಪ್‌ಗಳು ಪುಟ್ಟ ಅಂಗೈಗಳ ಮೇಲೆ ಅವತರಿಸಲು ಕಾದಿವೆ. ಎಲ್ಲಾದರೂ ಇರು, ಎಂತಾದರೂ ಇರು, ಓದುವುದನ್ನು ಬಿಡದಿರು ಎಂದು ಹೇಳದೇ ಬೇರೆ ದಾರಿ ಇಲ್ಲ.

ನಮ್ಮ ನಾಡಿನ ಮಕ್ಕಳಿಗೆ ಕನ್ನಡದಲ್ಲಿ ಅಥವಾ ಅವರ ಪರಿಸರದ ಭಾಷೆಯಲ್ಲಿ ಕೂಡ ಓದುವುದನ್ನು ಕಲಿಸುವುದು ಸಾಧ್ಯವೇ? ಮತ್ತು ಅದಕ್ಕೆ ಅಗತ್ಯವಾದ ಬರಹಗಳು ವಿಸ್ತೃತವಾಗಿ, ವೈವಿಧ್ಯಮಯವಾಗಿ, ತಾಂತ್ರಿಕರೂಪದಲ್ಲಿ ಉಪಕರಣಗಳಲ್ಲಿ ಲಭ್ಯವಿದೆಯೇ? ಅತ್ಯಾಧುನಿಕ ತಾಂತ್ರಿಕ ಉಪಕರಣಗಳ ಮೇಲೆ ಕೈಯಿಡಲಾರದ ಬಡ ಮಕ್ಕಳು, ಗ್ರಾಮೀಣ ಮಕ್ಕಳಲ್ಲಿ ಓದುವ ಹವ್ಯಾಸವನ್ನು ಮುದ್ರಿತ ಪುಸ್ತಕಗಳ ಮೂಲಕವಾದರೂ ಬೆಳೆಸುವುದು ಹೇಗೆ? ಮಕ್ಕಳ ಓದುವಿಕೆಗೆ ಸಂಬಂಧಿಸಿದಂತೆ ಇನ್ನೂ ಕೆಲವು ಮುಖ್ಯ ಪ್ರಶ್ನೆಗಳಿವೆ. ಈ ದಿಕ್ಕಿನಲ್ಲಿ ಚಿಂತನೆಗೆ ಸಕಾಲ ಅದಾಗಲೇ ಬಂದಾಗಿದೆ.

–ಆರ್. ಪೂರ್ಣಿಮಾ